

ಕಥಕಳಿಯನ್ನು ಪ್ರದರ್ಶಿಸುವ ಅವಕಾಶ ಸಿಕ್ಕಿದೆ ಎನ್ನುವುದು ನನಗೆ ಖುಷಿಯ ವಿಷಯ. ಕಲೆಯ ವಿಚಾರದಲ್ಲಿ ನಾನೊಬ್ಬ ಸಂತೃಪ್ತ ಕಲಾವಿದ. ಇದರಿಂದ ನನಗೆ ಅಷ್ಟೇನೂ ಆದಾಯ ಗಳಿಸುವುದು ಸಾಧ್ಯವಾಗಲಿಲ್ಲ ಎನ್ನುವ ವಿಚಾರವೊಂದಿದೆಯಾದರೂ, ನಾನು ಈ ಕಲೆಯೊಂದಿಗೆ ಬೆಳೆದಿದ್ದೇನೆ ಎನ್ನುವುದು ಆದಾಯಕ್ಕಿಂತ ದೊಡ್ಡದಾದ ಲಾಭ.

ಗ್ರೀಸ್‌ನಲ್ಲಿ ನಡೆದ ಒಂದು ಘಟನೆ ಹೇಳುತ್ತೇನೆ. ಯುರೋಪಿಯನ್ ಥಿಯೇಟರ್ ಫೆಸ್ಟಿವೆಲ್‌ನಲ್ಲಿ ನಾವು ಗ್ರೀಕ್‌ನ ಲೇಖಕ ಯೂರಿಪಿಡಿಸ್‌ನ 'ಬ್ಯಾಕೆ' ದುರಂತ ನಾಟಕದ ಕಥೆಯನ್ನು ಕಥಕಳಿಗೆ ಅಳವಡಿಸಿ ಪ್ರದರ್ಶಿಸಿದ್ದೆವು. ಅದರಲ್ಲೊಂದು ದೃಶ್ಯ ಅತ್ಯಂತ ಭಯಾನಕವಾಗಿದೆ. ಆವೇಶದಲ್ಲಿ ತಾಯಿಯೇ ಮಗನನ್ನು ಕಾಡಿನ ಸಿಂಹವೆಂದು ಭಾವಿಸಿ ಕೊಂದು, ತಲೆಯನ್ನು ಕೈಯಲ್ಲಿ ಹಿಡಿದು, 'ನೋಡಿರಿಲ್ಲಿ... ಕಾಡಿನ ಸಿಂಹವನ್ನು ಕೊಂದು ಹಾಕಿರುವೆ' ಎಂದು ಹೇಳುತ್ತಾಳೆ. ಅವಳ ತಂದೆಯೇ ಮುಂದೆ ಬಂದು, ಮಗಳಿಗೆ ತಿಳಿ ಹೇಳಿ, 'ದಯವಿಟ್ಟು ಎಚ್ಚರ ತಂದುಕೊ. ನೀನು ನಿನ್ನ ಮಗನನ್ನೇ ಕೊಂದಿರುವೆ' ಎಂದು ಹೇಳುತ್ತಾನೆ. ಅವಳಿಗೆ ಎಲ್ಲವೂ ಅರಿವಿಗೆ ಬರುವ ವೇಳೆಗೆ ಕಾಲ ಮಿಂಚಿಹೋಗಿರುತ್ತದೆ. ಈ ಪ್ರದರ್ಶನಕ್ಕೆ ಬಹಳ ಮೆಚ್ಚುಗೆ ವ್ಯಕ್ತವಾಗಿ ಇಡೀ ಸಭಾಂಗಣದ ಪ್ರೇಕ್ಷಕರು ಎದ್ದು ನಿಂತು, 'ಮತ್ತೊಮ್ಮೆ ಪ್ರದರ್ಶಿಸಿ...' ಎಂದು ಕೂಗಿ ಹೇಳಿದರು. ಆದರೆ ಅಷ್ಟೊಂದು ಭಯಾನಕವಾದ ದೃಶ್ಯವನ್ನು ಒಮ್ಮೆ ಪ್ರದರ್ಶಿಸುವುದೇ ಸವಾಲಾಗಿತ್ತು. 'ಮತ್ತೆ ನಾನು ಪ್ರದರ್ಶಿಸಲಾರೆ' ಎಂದು ಹೇಳಿಬಿಟ್ಟೆ. ಅದೇ ಪ್ರದರ್ಶನಕ್ಕೆ ಬಹುಮಾನವೂ ಬಂತು. ಮರುವರ್ಷ ಮತ್ತೊಂದು ಅಂತಹುದೇ ಟ್ರಾಜಿಡಿಯನ್ನು ಪ್ರದರ್ಶಿಸುವಂತೆ ಆಹ್ವಾನ ಬಂತು. ಈ ಪ್ರದರ್ಶನಗಳಿಗೆ ಉತ್ತಮ ಗೌರವಧನ ಕೊಡುತ್ತಾರಾದರೂ, 'ಇದೆಲ್ಲ ನನ್ನಿಂದ ಸಾಧ್ಯವಿಲ್ಲ' ಎಂದು ಹೇಳಿದೆ. ಮನಸ್ಸು ಕಲಕುವಂತಹ ಕಥೆಗಳು ಅವು.

**◆ ಕಲಾಪಯಣದಲ್ಲಿ ನಿಮ್ಮ ಪತ್ನಿ ಜಾನಕಿಯವರ ಪಾತ್ರ ಯಾವ ಬಗೆಯದು?**

ನನ್ನ ಪತ್ನಿ ಜಾನಕಿ, ನನ್ನ ಸೋದರಮಾವನ ಮಗಳು. ನಾವಿಬ್ಬರೂ ಚಿಕ್ಕಂದಿನಿಂದ ಒಟ್ಟಾಗಿ ಆಡಿ ಬೆಳೆದವರು. ಆಕೆಯನ್ನೇ ಮದುವೆಯಾಗುವ ಬಗ್ಗೆ ಯಾವ ಯೋಚನೆಯೂ ನನಗೆ ಇರಲಿಲ್ಲ. ಗಾಂಧಿ ಸೇವಾ ಸದನದಲ್ಲಿ ಕಲಿಕೆ ಮುಗಿಸಿ ಮನೆಗೆ ಮರಳಿದಾಗ,